


ಕೋಣೆಗಳು, ವಿಶಾಲವಾದ ವರಾಂಡಗಳು, ಹಜಾರಗಳು ಇರುವ ಮನೆಯ ಒಳಗೆ ಒಳಜಗಲಿಯು ವಿಷಾದದ ಭಾರದಂತೆ ಇತ್ತು. ರಾತ್ರಿಯಲ್ಲಿ ಅಲ್ಲಿ ದೀಪ ಹಚ್ಚಿಡಲು ಯಾರಿಗೂ ಹೇಳಲಿಲ್ಲ. ಯಾರೂ ಹಚ್ಚಿಡಬೇಕೆಂದು ಬಯಸಿದ್ದೂ ಇಲ್ಲ.

ಮಗನಿಗೆ ಅದರ ಅಗತ್ಯವಿಲ್ಲ. ಕೆಳಗಿನ ಮಹಡಿಯ ಕೋಣೆಯಲ್ಲಿ ಆತ ಮಲಗುವುದು. ಆ ಕೋಣೆಯ ಒಳಗೆಯೇ ಇರುವುದು ಮಗನಿಗೆ ಪ್ರಿಯವಾಗಿತ್ತು. ಅಲ್ಲಿನ ವಸ್ತುಗಳೆಲ್ಲ ಪರಿಚಿತವಾದವುಗಳೇ. ಪುಸ್ತಕಗಳು, ಚಿತ್ರಗಳು, ಕನ್ನಡಿಗಳು, ಗೋಡೆಯಲ್ಲಿ ಕೆಸರ ಗುರುತುಗಳು ಮೇಲಿನ ಮಹಡಿಯ ಜೇಡರ ಬಲೆಗಳನ್ನು ಸಹ ಹತ್ತಿರದಿಂದ ತಿಳಿಯಲು ಸಾಧ್ಯವಿರುವ ಭರವಸೆಯೊಡನೆ ಆತ ಸುತ್ತಲೂ ನೋಡಬಹುದಿತ್ತು. ಬಾಗಿಲು ಮುಚ್ಚಿದರೆ ಒಂದು ಪುಟ್ಟ ಜಗತ್ತು ಸಮೀಪದಲ್ಲಿದೆ.

ಗೋಡೆಗಳತ್ತ ಹಾರಾಡುವ ಕಿಟಕಿ ಪರದೆಗಳ ಸುರುಳಿಗಳನ್ನು ಸರಿಸಿದರೆ ಶಾಯಿ ಮೆತ್ತಿದ ಬೆರಳುಗಳನ್ನು ಉಜ್ಜಿದ ಗುರುತುಗಳನ್ನು ಕಾಣಬಹುದಿತ್ತು. ಗೊತ್ತಿಲ್ಲದೆ ಇರುವ ಯಾವುದೂ ಅದರೊಳಗೆ ಇಲ್ಲ.

ಕೆಳಗೆ ಸಮೀಪದಲ್ಲಿಯೇ ಇನ್ನೊಂದು ಮಲಗುವ ಕೋಣೆಯಿದೆ. ಅತಿಥಿಗಳಿಗಾಗಿ ಖಾಲಿಯಾಗಿಟ್ಟಿರಲಾಗುತ್ತದೆ. ಆದರೆ ಅದನ್ನು ತೆರೆಯುವುದೆಂದಿಲ್ಲ. ಇದುವರೆಗೆ ಅತಿಥಿಗಳು ಬಂದ ಅನುಭವವೂ ಇಲ್ಲ.

ಸಂಜೆಯ ಹೊತ್ತಿಗೆ ಮುಂಭಾಗದಲ್ಲಿ ನಾರಿನ ನೆಲಹಾಸು ಬಿಡಿಸಿ, ಹಾಸಿ ವರಾಂಡಕ್ಕೆ ಬಂದು ನಿಲ್ಲುವಾಗಲೆಲ್ಲ ಆತನಿಗೆ ಅನ್ನಿಸಿದ್ದಿದೆ. ಮೌನವಾಗಿರುವ ಈ ಮೂರು ಜೀವಿಗಳಿಗೆ ಇಷ್ಟು ದೊಡ್ಡ ಮನೆಯ ಅಗತ್ಯವಿಲ್ಲ. ಅಂಗಳದಲ್ಲಿ ತಂತಿಬೇಲಿ ಕಟ್ಟಿ ಪ್ರತ್ಯೇಕವಾಗಿ ವಿಭಾಗಿಸಿದ ಹೂದೋಟ, ಹುಲ್ಲು ಹಾಸು, ಗೋಡೆಯ ಸಮೀಪ ಕಾಯಿಬಿಟ್ಟು ನಿಂತಿರುವ ದೀವಿ ಹಲಸಿನ ಮರಗಳು. ಗಾಜಿನ ಚೂರುಗಳನ್ನು ನೆಟ್ಟು ಭದ್ರಪಡಿಸಿದ ಗೋಡೆಗಳೂ ಅಗತ್ಯವಿಲ್ಲ. ಮುಂಭಾಗದಲ್ಲಿ ಕಣ್ಣುಗಳನ್ನು ನೆಟ್ಟಾಗಲೆಲ್ಲ ಅಸುಖಕರವಾದ ನೆನಪೊಂದು ಮನಸ್ಸಿನಲ್ಲಿ ಗುಳ್ಳೆಯಂತೆ ಒಡೆದು ಚದುರುತ್ತದೆ.